## ನನ್ನ ಓದು

ನಂಬಿಕೆ-ನಿಷ್ಠೆಗಳೆಂಬ ಮನೆಯ ಒಳ ಬೇಲಿಯೊಳಗೆ ಬಂಧಿತರಾದವರನ್ನು ನಮಗೆ ಅರ್ಥಮಾಡಿಸುತ್ತಾರೆ. ಈ ರೇಖೆಯ ಒಂದು ಅಂಚಿನಲ್ಲಿ ಅಪರಿಚಿತ ದೇಹಗಳ ಮೇಲೆ ಒಂಚೂರೂ ಮುಟ್ಟಿಸಿಕೊಳ್ಳದೇ ಮಡಿಮಡಿಯಾಗಿ ಟ್ಯಾಟೂ ಹಾಕುವ ಆನಂದ್-ಟೀ ಇದ್ದರೆ, ಇನ್ನೊಂದು ಅಂಚಿನಲ್ಲಿ ಹತ್ತೂ ದಿನಗಳ ಕರ್ಮಗಳನ್ನು ಒಂದೇ ದಿನದಲ್ಲಿ ಮುಗಿಸಿಕೊಡುವ, 'ಟೂ ಸ್ಪೀಡ್'ನಲ್ಲಿ ಅಬ್ರಿಡ್ಜ್ ಗರುಡ ಪುರಾಣ ಕೇಳಿಸಿ ಮೋಕ್ಷ ದೊರಕಿಸಿಕೊಡುವ ಸುಧೀಂದ್ರತೀರ್ಥರಿದ್ದಾರೆ. ತಮ್ಮ ಮೇಲೆ ಹೊರಿಸಿರುವ ಸಂಪ್ರದಾಯದ ಕಟ್ಟನ್ನು ಪಾಲಿಸಲೇಬೇಕಾದ ಅಸಹಾಯಕತೆ ಮತ್ತು ಅದನ್ನು ಮೀರಲೊಲ್ಲದ ಹಟಮಾರಿತನ ಇಲ್ಲಿನ ಪಾತ್ರಗಳನ್ನು ಸಿನಿಮೀಯ ಮಾಡುವುದ ತಡೆದಿದೆ. ಅನಂತ ತನ್ನ ಸಾಗರೋಲ್ಲಂಘನದಿಂದಲೇ ಈ ಸಂಕುಚಿತತ್ವಗಳಿಂದ ಬಿಡಿಸಿಕೊಂಡಿದ್ದಾನೆ. ಅದೇಕೋ ಆತನ ಹೆಂಡತಿ ನರ್ಮದಾಳಿಗೆ ಈ ಬಿಡುಗಡೆಯ ಭಾಗ್ಯವಿಲ್ಲ. ಮಗಳ ಮದುವೆಯಲ್ಲಿ ಗೌರಿಪೂಜೆಯೂ, ಮಾಂಗಲ್ಯಧಾರಣೆಯೂ ಇರಲೇಬೇಕೆಂಬ ಹಟ ಹಿಡಿವ ನರ್ಮದಾ ಕಾದಂಬರಿಯುದ್ದಕ್ಕೂ ತನ್ನ ಹರಿತ ಮಾತುಗಳಿಂದಲೇ ಮೆಚ್ಚುಗೆಯಾಗುತ್ತಾಳೆ.

ಮಗಳ ವಿಷಯಕ್ಕೆ ಬಂದಾಗ ಮಾತ್ರ, ಸಮಾಜ ಇನ್ನಿಲ್ಲದಂತೆ ಹೊರಿಸಿರುವ ತಂದೆತನದ ಜವಾಬ್ದಾರಿಯನ್ನು ಜತನದಿಂದ ಎತ್ತಿ ಹಿಡಿದವ ಅನಂತ. ಹೀಗಾಗಿಯೇ ಅಮೆಜಾನ್ ಅಕೌಂಟಿನಿಂದ ಅವಳು ಕೊಂಡಿರಬಹುದಾದ ವಸ್ತುಗಳನ್ನೂ, ತನಗೆ ನೋಡಲು ನಿಷಿದ್ಧವಿರುವ ಅವಳ ವೈದ್ಯಕೀಯ ದಾಖಲೆಗಳನ್ನೂ ಪರೀಕ್ಷಿಸಿ ಅವಳ ಒಳಬಾಳಿನ ಮೇಲೆ ಗೊತ್ತಿಲ್ಲದಂತೆ ಕಣ್ಣಿಡುವುದು ಅವನಿಗೆ ತಪ್ಪೆಂದು ಗೊತ್ತಿದ್ದರೂ, ಆ ಅರಿವು ಅವನನ್ನು ಆ ಕ್ರಿಯೆಯಿಂದೇನೂ ತಡೆವುದಿಲ್ಲ. ಕಡೆಗೆ ಅಕ್ಷರಾ ಬಿಳಿ ಹುಡುಗನ ಬದಲು ಕಪ್ಪು ಹುಡುಗನನ್ನೋ, ಮೆಕ್ಸಿಕನ್ ಸಂಜಾತನನ್ನೋ ಇಷ್ಟಪಟ್ಟಿದ್ದರೂ ತಾನು ಅವಳ ನಿರ್ಧಾರದ ಕುರಿತು ಇಷ್ಟೇ ಸ್ವಾಗತಾರ್ಹವಾಗಿ ಇರುತ್ತಿದ್ದೆನೇ ಎಂದು ತನ್ನೊಳಗೇ ತಾನೊಮ್ಮೆ ಇಣುಕಿ ನೋಡಿಕೊಳ್ಳುತ್ತಾನೆ. ಆಗ ಅವನಿಗೆ, 'ನಾನು ಜಾತಿವಾದಿ ಅಲ್ಲ ಅಂದುಕೊಂಡಿದ್ದೆ. ಈಗ ರೇಸಿಸ್ಟ್ ಇರಬಹುದು ಅನ್ನಿಸಿತು' ಎಂದೆನಿಸುತ್ತದೆ.

ಈ ಕಾದಂಬರಿಯ ಕೆಲ ಭಾಗಗಳನ್ನು ಓದುವಾಗ ಅವರವರ ಮನೋಗುಣಕ್ಕೆ ಅನುಗುಣವಾಗಿ ಅಲ್ಲಲ್ಲಿ ಇರುಸುಮುರುಸಾಗುವ ಸಾಧ್ಯತೆಗಳಿವೆ. ನಾವು ಅತ್ಯಾಧುನಿಕ ಅಂದುಕೊಂಡ ಈ ಕಾಲದಲ್ಲೂ ಬಾಲ್ಯವಿವಾಹ, ವೇಣಿಹರಣದಂಥ ಸಾಮಾಜಿಕ ಅನಿಷ್ಟಗಳು ನಡೆವಾಗ ಮತ್ತು ಅದನ್ನು ನಡೆಸಿದವರು ತಮ್ಮ ಕೃತಿಯನ್ನು ಸಮರ್ಥಿಸಿಕೊಳ್ಳುವುದು ಕೇಳುವಾಗ ಸಂಕಟವಾಗುತ್ತದೆ. ಆದರೆ ರೋಗವನ್ನು ಗುರುತಿಸದೇ ಅದರ ಇಲಾಜು ಸಾಧ್ಯವಿಲ್ಲ ಎಂಬ ಚಿಕಿತ್ಸಕ ಎಚ್ಚರದಿಂದಲೇ ಸ್ವತಃ ವೈದ್ಯನಾದ ಅನಂತ ಈ ಎಲ್ಲವನ್ನೂ ನಿರೂಪಿಸುತ್ತಾನೆ. ನೊಂದವರ ಪರ ಸಹಾನುಭೂತಿಗಿಂತ ಹೆಚ್ಚಾಗಿ ಅವನಿಗೆ ಅಂತಃಕರಣವಿದೆ ಎಂಬುದು ವಿದಿತವಾಗಿದೆ.

ಕಾದಂಬರಿಯುದ್ದಕ್ಕೂ ಸಂಭಾಷಣೆಗಳಲ್ಲಿ ಬರುವ ಆಕರಗಳು ಕಾದಂಬರಿಕಾರರ ವಿಸ್ತೃತ ಓದಿಗೆ ಸಾಕ್ಷಿಯಾಗಿ ನಿಲ್ಲುತ್ತದೆ. ಅದನ್ನವರು ಯಾವುದೇ ಪಾಯಿಂಟ್ ಪ್ರೂವ್ ಮಾಡಲು ಬಳಸಿಕೊಂಡಿಲ್ಲ ಅನ್ನುವುದು ಕಾದಂಬರಿಯ ಪುಣ್ಯ. ಮನುಷ್ಯನ ಒಳಲೋಕವನ್ನು ಅವನ ಸಮುದಾಯದೊಂದಿಗೆ ಬೆಸೆಯಲೆಂದೇ ಸಂಪ್ರದಾಯಗಳು, ಪದ್ಧತಿಗಳು, ನಂಬಿಕೆಗಳು ಹುಟ್ಟಿಕೊಳ್ಳುತ್ತವೆ. ಒಂದು ರೀತಿಯಲ್ಲಿ ನೋಡಿದರೆ ಇದು ಸಮಾಜ ಜೀವಿಯಾದ ಮನುಷ್ಯ ಜಾತಿಯ ಉಳಿವಿಗೆ ಅತ್ಯವಶ್ಯಕವೂ ಹೌದು. ಆದರೆ ಅದೇ ಮನುಷ್ಯನಿಂದ ಮನುಷ್ಯನನ್ನು ಒಡೆಯಲೂ ಬಳಕೆಯಾಗುವುದು ವಿಪರ್ಯಾಸವೇ ಸರಿ. ಅನಂತ, ಅಕ್ಷರಾರಿಗೆ ಲಂಘನದಿಂದ ಸಾಧ್ಯವಾದ ಈ ಎಸ್ಕೇಪ್ ರುಕ್ಮಿಣಿಗೆ ಸಾಧ್ಯವಾಗುವುದಿಲ್ಲ.

'...ಚಾತುರ್ಮಾಸದಿಂದ ಚಾತುರ್ಮಾಸಕ್ಕೆ ಜೀವಿಸಿದವ್ರಪ್ಪಾ ನಾವು... ಶನಿವಾರ, ಭಾನುವಾರ ಹಬ್ಬ ಹರಿದಿನ ಮಾಡೋಕೂ, ಪ್ರತಿ ನಿಮಿಷಾನೂ ದೇವರುಗಳನ್ನು ನಿಭಾಯಿಸೋಕೂ ಬಹಳ ವ್ಯತ್ಯಾಸ ಇದೆಯಪ್ಪಾ. ನಮಗೂ ನಿಮ್ಮ ಹಾಗೆ ದೇವರುಗಳು ಆಪತ್ಕಾಲದಲ್ಲಿ ಕಾಪಾಡೋ ಶಕ್ತಿಗಳು ಮಾತ್ರ ಆಗಿದ್ರೆ ಚೆನ್ನಾಗಿರೋದು' ಎನ್ನುವ ರುಕ್ಮಿಣಿ ಒಂದು ದೊಡ್ಡ ವರ್ಗದ ಪ್ರತಿನಿಧಿಯಾಗಿ ಕಾಣಿಸುತ್ತಾಳೆ. ಬದುಕಿನುದ್ದಕ್ಕೂ ತನ್ನ ಸ್ವಂತ ಮನೆಯಲ್ಲೇ ಪರಕೀಯಳಾಗಿ, ಅಡ್ಡಡ್ಡ ಪಾತ್ರೆ ಉಜ್ಜಿದರೂ ಅದು